ನಾಗರಾಜರ ಬೆನ್ನು ತಟ್ಟುವಿಕೆಯಿಂದ ಕೊಂಚ ಮಟ್ಟಿಗೆ ಅಹಂಕಾರ ಪಟ್ಟೆ. ಅವರ ಸಂಗಡ ಸೃಜನಶೀಲರ ವ್ಯಕ್ತಿತ್ವ, ಅವರ ಬರಹದ ಕ್ರಮವನ್ನು ಹತ್ತಿರದಿಂದ ಗಮನಿಸಿದೆ. ವಿಮರ್ಶಕರು ನನ್ನ ಬಗ್ಗೆ ಬರೆದಿದ್ದು ಬಹಳ ಕಡಿಮೆ. ಅವರ ವಿಮರ್ಶೆಯ ಹಂಗು ನನಗೆ ಯಾವತ್ತಿಗೂ ಬೇಡ.

ಬರಹಗಾರರಿಗೆ ಒಂದು ಮಟ್ಟದ ಉತ್ತೇಜನ ಬೇಕು. ನನ್ನ ಬಗ್ಗೆ ತಜ್ಞರು, ಆಪ್ತರು, ಓದುಗರು ತೀವ್ರವಾಗಿ ಸ್ಪಂದಿಸಬೇಕಿತ್ತು ಎಂದು ಆಗಾಗ ಅನಿಸುವುದುಂಟು. ಆ ಬಗೆಗೆಲ್ಲ ನಾನು ಚಿಂತಿಸುವ ಅಗತ್ಯವಿಲ್ಲ. ನನ್ನನ್ನು ಓದುವ ವಿಮರ್ಶಕರು ಪೂರ್ವಗ್ರಹಗಳಿಂದ ಮುಕ್ತವಾಗಿ ಓದಿದರೆ ಸಾಕು. ನಾನು ಕೇವಲ ಕಥೆಗಾರನಷ್ಟೇ ಅಲ್ಲ, ವಿಮರ್ಶಕನೂ ಹೌದು. ವಿಮರ್ಶಕರ ಇತಿಮಿತಿಗಳೂ ಗೊತ್ತು. ಹೂವು ಅರಳಲು ವಿಮರ್ಶಕರ ಅಗತ್ಯವಿಲ್ಲ. ಆದರೆ ಆ ಹೂವಿನ ಚೆಲುವನ್ನು ಸಾಕ್ಷೀಕರಿಸಲು ಅವರ ಅಗತ್ಯ ಇರಬಹುದು; ಅಥವಾ ಇಲ್ಲದೆಯೋ ಇರಬಹುದು. ನಾನು ಹೆಚ್ಚಾಗಿ ಉಳಿದುಕೊಂಡದ್ದು ವಿಮರ್ಶಕರಿಂದಲ್ಲ, ಸ್ವತಃ ಸಮರ್ಥರಾದ ಹಿರಿಯ ಕಿರಿಯ ವಾರಿಗೆಯ ಲೇಖಕರಿಂದ. ಹಾಗೆಯೇ ನನ್ನನ್ನು ತೋರಿದ, 'ಪ್ರಜಾವಾಣಿ' ಪತ್ರಿಕೆಯ ಬಳಗದಿಂದ.

ಕಥೆ ಬರೆಯಲು ತೊಡಗುವ ಮೊದಲು ನಾನು ಖಾಲಿ ಖಾಲಿಯಾಗಿರುತ್ತೇನೆ. ಏನೊ ಕಳೆದುಕೊಂಡಂತೆ, ಸೋತಂತೆ, ದಿಕ್ಕೆಟ್ಟಂತೆ, ಅನಾಥವಾಗಿರುತ್ತೇನೆ. ನಾಳೆಯೇ ಶಿಕ್ಷೆಗೆ ಸಿದ್ಧವಾಗಿರು ಎಂದು ಯಾರೊ ಆದೇಶ ಮಾಡಿ ಹೋಗಿದ್ದಾರೆ ಎಂಬ ತಬ್ಬಲಿತನ ತೀವ್ರವಾಗಿ ಕಾಡುತ್ತಿರುತ್ತದೆ. ನನಗೆ ಯಾರೂ ಇಲ್ಲ ಎಂಬ ಸ್ವಮರುಕದಲ್ಲೂ ತಲ್ಲಣಿಸಿರುತ್ತೇನೆ. ಅಂತಹ ಗಳಿಗೆಯಲ್ಲಿ ಕರೆಯುವುದೇ ನನ್ನ ಬಾಲ್ಯಕಾಲ ಇಲ್ಲವೇ ನಿನ್ನೆ ಮೊನ್ನೆ ತಾನೆ ಯಾರೊ ಬಂದು ಮನದ ಮೇಲೆ ಬರೆ ಹಾಕಿಹೋಗಿರುವ ಘಟನೆ. ಸುಖವಾಗಿ ಇದ್ದಾಗ ನಾನು ಯಾವ ಒಂದು ಕಥೆಯನ್ನೂ ಬರೆದಿಲ್ಲ. ಕಥೆಗಾರರು ದುಃಖಿಗಳಾಗಿದ್ದಾಗಲೇ ಕಥೆ ಮೂಡುತ್ತವೆ ಎಂದಲ್ಲ. ಒಂದು ಬಗೆಯಲ್ಲಿ **Sense of Human lose** ಕಥೆಗಾರರ ಆಳದಲ್ಲಿ ಮುಳ್ಳಿನಂತೆ ಒತ್ತುತ್ತಲೇ ಇರುತ್ತದೆ. **Sense of delightment** ಕೂಡ ದುಃಖದ ಬೆಳಕೇ ಆಗಿರುತ್ತದೆ. ಅಹಿಂಸೆಯ ಎರಡು ಪರಮ ಧರ್ಮಗಳಾದ ಜೈನ ಮತ್ತು ಬೌದ್ಧ ಧರ್ಮಗಳು ಈ ಧಾರೆಯಲ್ಲೇ ಧ್ಯಾನದ ಕಥೆಗಳನ್ನು ನಿರೂಪಿಸಿದ್ದುದು. ನಮ್ಮ ಪೂರ್ವಿಕರು ಜನಪದ ಕಥೆಗಳ ಆಕಾಶದ ಕನಸಿನ ಪರದೆಗಳ ಮೇಲೆ ಆಡಿ ತೋರಿಸಿ ಹಾಡಿ ಹೇಳಿದ್ದನ್ನೇ ನಾನು ನನ್ನ ಕಾಲದ ಭಾಷೆ ಹಾಗೂ ಭಾವ ಸಂವಹನದ ರೀತಿಯಲ್ಲಿ ಉತ್ಕಟವಾಗಿ ನಿರೂಪಿಸಲು ತೊಡಗುವೆ. ಆ ಮೂಲಕ ಬಾಲ್ಯ ಕಾಲವ ಮತ್ತೆ ಸಂಧಿಸಿ ವರ್ತಮಾನದ ಹಿಂಸೆಯನ್ನು ದಾಟಿ ನಾಳಿನ ಯಾವುದೊ ಒಂದು ಮಾನವ ಕೊಂಡಿಗೆ ನಾನು ಯಾರಿಗಾದರೂ ಒಂದು ಪತ್ರ ಬರೆವ ಕ್ರಮ ನನಗೆ ಉತ್ಕಟವಾಗಿ ತಿಳಿದಿತ್ತು. ಆಕಸ್ಮಿಕವಾಗಿ ನಾನು ಆ ವೇಳೆಗೆ ಅನುವಾದಿತ ಟಾಲ್‌ಸ್ಟಾಯ್, ದಾಸ್ತೋವಸ್ಕಿ, ಚೆಕಾವ್ ಕಥೆಗಳ ಓದಿದ್ದೆ. ಹೆಚ್ಚಾಗಿ ಕಾಫ್ಕಾನ ಆರ್ದ್ರವಾದ ತಬ್ಬಲಿ ನಿರೂಪಣೆಗಳ ನನ್ನೆದೆಗೆ ಉಸಿರಿನಂತೆ ಬೆಸೆದುಕೊಂಡಿದ್ದೆ. ಗತಿಸಿಹೋದ ಸಾಕೇತ್ ರಾಜನ್ ತನ್ನ ನಕ್ಸಲ್‌ವಾದಿ ವೈಚಾರಿಕ ಬಾಣಗಳ ನನ್ನೆದೆಗೆ ನೆಟ್ಟಿದ್ದ. ನನ್ನಿಂದ ಈ ಬಾಣಗಳ ಹೂಡಿ ಸಮಾಜ ಸುಧಾರಿಸಲಾರೆ ಎಂದು ಸಾಕೇತ್‌ಗೆ ವಿನಂತಿಸಿ, 'ನನ್ನ ಕೈಗೇಕೆ ಅಣ್ಣಾ ಬಂದೂಕು... ಒಂದು ಪೆನ್ನು ಸಾಕು ಅಣ್ಣಾ... ನನ್ನನ್ನು ಬಿಟ್ಟು ಬಿಡಣ್ಣಾ' ಎಂದು ಒಂದು ಮೊಲದಂತೆ ವಿನಂತಿಸಿದ್ದೆ. ಆ ನಂತರವೇ ನಾನೂ ಕೂಡ ಜಗತ್ತಿನ ಯಾವುದೇ ಸಂವೇದನಾಶೀಲ ಕಥೆಯ ಮುಚ್ಚಿದ ಬೀಗದ ಬಾಗಿಲು ತೆಗೆಯಬಹುದು ಎನಿಸಿದ್ದು... ಆಗಲೇ ನಾನು ಕಥೆ ಬರೆದದ್ದು. ಹಾಗೆ ಬರೆದ ಕಥೆಗಳನ್ನು ಪೋಸ್ಟ್ ಮಾಡುವ ದಾರಿಯೂ ನನಗೆ ತಿಳಿದಿರಲಿಲ್ಲ. ಗೆಳೆಯ ರಾಜಪ್ಪ ದಳವಾಯಿಯೇ 'ಒಂದು ಹಳೆಯ ಚಡ್ಡಿ', 'ಬುಗುರಿ' ಕಥೆಗಳನ್ನು ನನಗೇ ತಿಳಿಯದಂತೆ